ದೂರವೇ ನಿಂತು ಕೈಮುಗಿದ. ನಾವೀಗ ಕೇಸಿಗೆ ಹೊಸ ತಿರುವು ಸಿಗುವುದಿರಲಿ, ನಮ್ಮೊಳಗೊಂದು ಸಣ್ಣ ಅವಮಾನ ಹಾಗೂ ಕೋಪದ ಕಿಡಿ ಹೊತ್ತಿಕೊಳ್ಳುವುದರೊಂದಿಗೆ ಬೆಳಗ್ಗೆಯಿಂದ ಕೂತು ಸಮಯ ವ್ಯಯಿಸಿದ್ದು ದಂಡವಾಯಿತಲ್ಲ ಎಂಬ ಸಣ್ಣ ದುಃಖದಲ್ಲಿದ್ದೆವು. ಈ ಹಮೀದನನ್ನು ಹೊಸದಾಗಿ ವಿಚಾರಣೆ ನಡೆಸುವುದೋ ಅಥವಾ ಕೇಸು ಮುಂದೂಡುವುದೋ ತಿಳಿಯದೇ ನಮಗೂ ಅವಸರವಾಯಿತು. 'ಏನಪ್ಪ, ಸಬೀನಾಗೆ ನೀನು ಹೀಗೆ ಮೋಸ ಮಾಡಬಹುದಾ?' ಡೇಸಿ ಕೇಳಿದ್ದಕ್ಕೆ, 'ಇಲ್ಲ ಮೇಡಂ ನಾನು ಯಾಕೆ ಮೋಸ ಮಾಡ್ಲಿ? ನನ್ನ ತಮ್ಮ ಮಾಡಿದ್ದು ಇದೆಲ್ಲ. ಇಷ್ಟೊತ್ತು ನನ್ನ ಕಾರಿನಾಗ ಕೂಡ್ಸಿ ಲಾಕ್ ಮಾಡಿದ್ದ. ಮುಂಚಿನ ಮೂರು ವರ್ಷ ನಮ್ಮ ದೋಸ್ತೀ ಗೊತ್ತಿದ್ರೂ ಸುಮ್ನ ಇದ್ದಂವ ಈಗ ನಾನ ಆಕೀನ್ನ ಮದ್ವಿ ಅಕ್ಕೇನಿ ಅಂದ ಕೂಡ್ಲೇ ಸಿಟ್ಟು ಮಾಡಾಕಹತ್ಯಾನ. ಮದ್ವಿ ಏನೂ ಆಗೂದ ಬ್ಯಾಡ, ಇರೂದಿದ್ರ ಹಂಗ ಜೊತೀಯಾಗ ಇರು ಅಂತಾನ. ಮದ್ವಿ ಆದ್ರ ಆಕೀ ಮಗಗ ಆಸ್ತೀ ಹೊಕ್ಕತಿ ಅಂತಾನ. ಯಾರಿಗೋ ಹುಟ್ಟಿದ ಮಗೀಗ ನಿನ್ನ ಆಸ್ತೀ ಹೋಗಾಕ ನಾ ಬಿಡೂದಿಲ್ಲ ಅಂತಾನ. ಈಗ ಎರಡು ತಿಂಗಳಿಂದ ನನ್ನ ಫೋನು ಕಸಿದು ಅಕೀಗೆ ನಾನೇ ಮಾಡಿದ ಹಾಗೆ ಬೈದು ಮೆಸೇಜ್ ಮಾಡಿದ್ದೂ ಅವನೇ. ನನ್ನಿಂದ ದೂರ ಮಾಡ್ಬೇಕು ಅಂತ ಆಕೀನ್ನ ಫ್ಯಾಕ್ಟರಿಯಿಂದ ಹೊರಹಾಕಿದ್ದೂ ಅವ್ನೆ. ನಮ್ಮ ಖಾಂದಾನದಾಗ ಒಬ್ಬ ನೀಚ ಆಗಿ ಹುಟ್ಯಾನ್ರೀ ಅಂವ. ನಮ್ಮ ಅಮ್ಮೀ ನನಗಂತ ನಿಖಾ ಮಾಡಿದ ಕನ್ಯಾ ತಾನ ಮದ್ವಿ ಆಗ್ಯಾನ್ರಿ. ನಮ್ಮ ಅಮ್ಮೀ ಸತ್ತ ಮ್ಯಾಗ ನಾ ಒಂಟಿ ಆಗೇನ್ರೀ. ಈ ಹಾಳ ಆಸ್ತಿ ಪೈಸಾ ದೌಲತ್ತು ಯಾವ್ದೂ ಬ್ಯಾಡಾಗೇತಿ ಮೇಡಂ, ನನಗ ಸಬೀನಾ ಬೇಕು, ಆಕೀ ಮಗನೂ ಬೇಕು. ನನ್ನ ತಮ್ಮನಿಂದ ನನಗ ಬಿಡಗಡಿ ಕೊಡಸ್ರೀ ಬಾಯರ' ಅಂದ ಅವನ ಮಾತುಗಳ ಕೇಳಿಯೇ ಅತ್ತ ಸಬೀನಾ ಬಿಕ್ಕುತ್ತಿರುವುದು ಕೇಳುತ್ತಿತ್ತು.

ಹೇಳುವುದನ್ನು ಮುಗಿಸಿ ಅಕ್ಷರಶಃ ಅಲ್ಲಿಯೇ ಕುಸಿದು ಕುಳಿತ ಹಮೀದನನ್ನ ಈಗ ಸಬೀನಾ ಓಡಿಹೋಗಿ ತಬ್ಬಿಕೊಂಡು ಕೂತಳು. 'ಇಬ್ರೂ ಇಷ್ಟಪಟ್ಟೇ ಸೇರಿದ್ದೆವು ಮೇಡಂ. ದೇವರಂಥ ಮನುಷ್ಯ ಇವ್ರು, ಎರ್ಡುರ್ ಗಂಟೆ ರಾತ್ರೆತಂಕ ಮಾತಾಡೋರು, ಹೊತ್ತಿಲ್ಲ ಗೊತ್ತಿಲ್ಲ ಕಾಲ್ ಮಾಡೊರು. ಈಗ್ಯಾಕೆ ಹೀಗಾದ್ರು ಅನ್ನಿಸ್ತು ಮೇಡಂ' ಅನ್ನುತ್ತ ಖುಷಿಯ ಕಂಪನ ಅನುಭವಿಸುತ್ತಿದ್ದಳು ಸಬೀನಾ. 'ಈಕೀ ಹೇಳಿದ್ದೆಲ್ಲ ಸಚ್ಚೀ ಐತ್ರಿ ಬಾಯಾರೇ. ನಾ ಇಕೀನ್ನ ಲಗ್ನಾ ಆಕ್ಕನಿ, ನೀವ ತೋಡಾ ಹೆಲ್ಪ್ ಮಾಡರಿ. ಈಕೀ ಮಗನ್ನ ನಾನ ನೋಡ್ಕೋತೇನಿ, ನಾನ ಒಂಟಿ ಆಗೇನಿ, ನನಗೊಂದ ಜೊತೀ ಬೇಕರಿ ಬಾಯಾರೇ. ನನ ತಮ್ಮ ಸಲೀಮ್‌ಗ ಸೊಲ್ಪ ಸಚ್ಚೀ ಬುದ್ಧೀ ಹೇಳಿ ಎಲ್ಲಾ ಸರೀ ಮಾಡಸರಿ ಬಾಯಾರೇ' ಅನ್ನುತ್ತ ಬಿಕ್ಕುತ್ತಿದ್ದವನನ್ನು ನಾವು ನಾಲ್ವರೂ ಎದ್ದು ಹೋಗಿ ಸಮಾಧಾನ ಮಾಡಿದೆವು. ಸಬೀನಾ ಈಗ ತಾನೇ ಹೊದ್ದ ಹಸಿರು ದಾವಣಿಯೊಳಗಿನ ಜೋಡಿ ನವಿಲಿನ ಕಣ್ಣುಗಳ ಹಾಗೆ ನಮ್ಮೊಳಗೆ ಭರವಸೆಯ ಬಣ್ಣಗಳನ್ನು ತುಂಬತೊಡಗಿದಳು.

**ಸುನಂದಾ ಕಡಮೆ**

ಮನುಷ್ಯ ವ್ಯಾಪಾರವನ್ನು ಸೂಕ್ಷ್ಮವಾಗಿ, ಚಿತ್ರವತ್ತಾಗಿ ರೇಖಿಸುವ ಕಲೆಗಾರ್ತಿ ಸುನಂದಾ ಪ್ರಸ್ತುತ ಹುಬ್ಬಳ್ಳಿಯಲ್ಲಿ ನೆಲಸಿದ್ದಾರೆ. 'ಪುಟ್ಟಪಾದದ ಹೆಜ್ಜೆ ಗುರುತು', 'ಗಾಂಧಿ ಚಿತ್ರದ ನೋಟು', 'ಕಂಬಗಳ ಮರೆಯಲ್ಲಿ', 'ತುದಿ ಮಡಚಿಟ್ಟ ಪುಟ' ಅವರ ಕಥಾಸಂಗ್ರಹಗಳು, 'ಬರೀ ಎರಡು ರೆಕ್ಕೆ', 'ದೋಣಿ ನಡೆಸುವ ಹುಟ್ಟು' ಕಾದಂಬರಿಗಳು, ಕವಿತೆ, ಅಂಕಣ ಬರಹಗಳ ಪುಸ್ತಕಗಳನ್ನು ಪ್ರಕಟಿಸಿದ್ದಾರೆ.